ಆಕಾಶವಾಣಿ **31.07.2025**

**ಪ್ರದೇಶ ಸಮಾಚಾರ** **ಗುರುವಾರ**

**ಓದುತ್ತಿರುವವರು: ಹರ್ಷವರ್ಧನ ಶೀಲವಂತ** **12 ಗಂಟೆಗೆ**

<><><>

**1. ಮುಂಗಾರು ಹಂಗಾಮಿಗೆ,** 11 ಲಕ್ಷದ 17 ಸಾವಿರ ಮೆಟ್ರಿಕ್ ಟನ್‌ಗಳಷ್ಟು ಯೂರಿಯಾ, ರೈತರಿಗೆ ಬೇಕಾಗಿದೆ. ಏಪ್ರಿಲ್ ನಿಂದ ಜುಲೈ ವರೆಗೆ, 6 ಲಕ್ಷದ 81 ಸಾವಿರ ಮೆಟ್ರಿಕ್ ಟನ್ ರಸಗೊಬ್ಬರದ ಬೇಡಿಕೆ ಇದೆ. ಆದರೆ ಕೇಂದ್ರ ಸರ್ಕಾರ 5 ಲಕ್ಷದ 17 ಸಾವಿರ ಮೆಟ್ರಿಕ್ ಟನ್ ಮಾತ್ರ ಸರಬರಾಜು ಮಾಡಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಸಚಿವರು ಹಾಗೂ ಶಾಸಕರೊಂದಿಗೆ, ಬೆಂಗಳೂರಿನ ವಿಧಾನಸೌಧದಲ್ಲಿ ಅವರು ಸಭೆ ನಡೆಸಿದರು.

**ಈ ವರ್ಷ 2 ಲಕ್ಷ ಹೆಕ್ಟರ್ ಭೂಮಿಯಲ್ಲಿ,** ರೈತರು ಮುಸುಕಿನ ಜೋಳವನ್ನು, ಹೆಚ್ಚು ಬಿತ್ತನೆ ಮಾಡಿದ ಪರಿಣಾಮ, ರಸಗೊಬ್ಬರದ ಬೇಡಿಕೆ ಹೆಚ್ಚಿದೆ. ಕೇಂದ್ರ ಸರ್ಕಾರ, ಯೂರಿಯಾ ಪ್ರಮಾಣದಲ್ಲಿ, 1 ಲಕ್ಷದ 66 ಸಾವಿರ ಮೆಟ್ರಿಕ್ ಟನ್ ಕಡಿಮೆ ಪೂರೈಸಿದೆ ಎಂದು, ಸಭೆ ಬಳಿಕ, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

**ರಾಜ್ಯದ ರೈತರಿಗೆ ಸಮಸ್ಯೆ ಆಗದಂತೆ,** ಕೃಷಿ ಇಲಾಖೆ ಅಧಿಕಾರಿಗಳ ಜೊತೆ ಸತತ ಸಂಪರ್ಕದಲ್ಲಿದ್ದು, ಪರಿಹಾರ ಕಂಡುಕೊಳ್ಳಲು, ಮುಖ್ಯಮಂತ್ರಿಯವರು, ಜಿಲ್ಲಾ ಉಸ್ತುವಾರಿ ಸಚಿವರಿಗೆ ಸೂಚಿಸಿದ್ದಾರೆ.

<><><>

**2. ಹಣಕಾಸು ಸೇರ್ಪಡೆಯ,** ಪರಿಪೂರ್ಣತೆ ಅಭಿಯಾನದ ಅಂಗವಾಗಿ, ಕೋಲಾರದಲ್ಲಿ, ಕೇಂದ್ರ ಪುರಸ್ಕೃತ ವಿಮೆ ಯೋಜನೆಗಳು, ಡಿಜಿಟಲ್ ಬ್ಯಾಂಕಿಂಗ್, ಸೈಬರ್ ಸುರಕ್ಷತೆ ಹಾಗೂ ಸಾಮಾಜಿಕ ಸುರಕ್ಷತಾ ಯೋಜನೆಗಳ ಕುರಿತು, ಜನ ಜಾಗ್ರತಿ ಜರಗಿತು. ಪ್ರದೇಶ ಸಮಾಚಾರಕ್ಕಾಗಿ, ಅಗ್ರಣಿ ಬ್ಯಾಂಕ್ ಅಧಿಕಾರಿ ಮಾಹಿತಿ ನೀಡಿದ್ದಾರೆ.

<><><>

**3. ಉತ್ತರಕನ್ನಡ ಜಿಲ್ಲೆ, ಕಾರವಾರದ ಜಿಲ್ಲಾ** ಆಸ್ಪತ್ರೆಯನ್ನು, ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವಿಲೀನ ಗೊಳಿಸಿದ್ದು, ಶಿರಸಿ ತಾಲೂಕು ಆಸ್ಪತ್ರೆಯನ್ನು, ಜಿಲ್ಲಾ ಆಸ್ಪತ್ರೆಯಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದು, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ, ತಿಳಿಸಿದ್ದಾರೆ.

ಕಾರವಾರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ಆರೋಗ್ಯ ಇಲಾಖೆ ಪ್ರಗತಿ ಪರಿಶೀಲಿಸಿ, ಮಾತನಾಡಿದರು.

ಸಿಟಿ ಸ್ಕ್ಯಾನ್, ಎಂ.ಆರ್.ಐ, ಕಿಮೋಥೇರಪಿ ಡೇ ಕೇರ್ ಸೆಂಟರ್, ಮಹಿಳಾ ಮತ್ತು ಮಕ್ಕಳ ವಿಭಾಗಕ್ಕೆ ಅಗತ್ಯ ಸಿಬ್ಬಂದಿ ಕುರಿತು, ಪ್ರಸ್ತಾವ ಸಲ್ಲಿಸುವಂತೆ ಜಿಲ್ಲಾಡಳಿತಕ್ಕೆ ಸಚಿವರು ಸೂಚಿಸಿದರು.

<><><>

**4. ಕಾರವಾರದಲ್ಲಿ ಸುದ್ದಿಗೋಷ್ಠಿ ನಡೆಸಿದ,** ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ್, ರಾಜ್ಯದ ವೈದ್ಯಕೀಯ ಆಂಬುಲೆನ್ಸ್‌ಗಳ ಸೇವೆಯನ್ನು, ಕೆ.ಪಿ.ಎಂ.ಇ. ಕಾನೂನಿನಡಿ ತರಲು, ಪ್ರಸಕ್ತ ಮಳೆಗಾಲದ ವಿಧಾನಸಭೆ ಅಧಿವೇಶನದಲ್ಲಿ, ಮಸೂದೆ ಮಂಡನೆಯಾಗಲಿದೆ, ಎಂದರು.

ರಾಜ್ಯದಲ್ಲಿ ಇದೇ ಮೊದಲ ಬಾರಿಗೆ, ಆರೋಗ್ಯ ಇಲಾಖೆಯ, 5 ಸಾವಿರದ 500 ಜನ ಸಿಬ್ಬಂದಿಯನ್ನು, ಪಾರದರ್ಶಕವಾಗಿ ಆಪ್ತ ಸಮಾಲೋಚನೆ ಮೂಲಕ, ವರ್ಗಾಯಿಸಲಾಗಿದೆ. ತಜ್ಞ ವೈದ್ಯರ ವೇತನ ಹೆಚ್ಚಳ ಮತ್ತು ನೇಮಕಾತಿಗೆ, ಆದ್ಯತೆ ನೀಡಲಾಗಿದೆ ಎಂದರು.

<><><>

**5. ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿಗಾಗಿ,** ಮರು ವಿನ್ಯಾಸಗೊಳಿಸಿದ, ಹವಾಮಾನ ಆಧಾರಿತ, ಬೆಳೆ ವಿಮಾ ಯೋಜನೆ ಅಡಿ, ರೈತರು ಹೆಸರು ನೋಂದಾಯಿಸಲು, ಆಗಸ್ಟ್ 11 ಕೊನೆಯ ದಿನವಾಗಿದೆ ಎಂದು, ಕಲಬುರಗಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ತಿಳಿಸಿದ್ದಾರೆ.

<><><>

**6. ಮಾನವ ಕಳ್ಳ ಸಾಗಣೆ ತಡೆಗಟ್ಟುವುದು,** ಪ್ರತಿಯೊಬ್ಬರ ಜವಾಬ್ದಾರಿ ಎಂದು, ಹಾಸನ ಜಿಲ್ಲೆ ಪ್ರಧಾನ ನ್ಯಾಯಾಧೀಶರಾದ, ಹೇಮಾವತಿ ಹೇಳಿದ್ದಾರೆ.

ಹಾಸನಾಂಬಾ ಕಲಾ ಕ್ಷೇತ್ರದಲ್ಲಿ, ಮಾನವ ಕಳ್ಳ ಸಾಗಣೆ ತಡೆ ದಿನಾಚರಣೆ ಉದ್ಘಾಟಿಸಿ, ಅವರು ಮಾತನಾಡಿದರು.

18 ವರ್ಷದೊಳಗಿನ ಮಕ್ಕಳನ್ನು, ಯಾವುದೇ ಕೆಲಸಗಳಿಗೆ ನೇಮಕ ಮಾಡುವಂತಿಲ್ಲ; ಅದು ಶಿಕ್ಷಾರ್ಹ ಅಪರಾಧ ಎಂದರು.

<><><>

**7. ಭಾರತೀಯ ಸಂವಿಧಾನದ,** 23ನೇ ವಿಧಿ ಅಡಿ, ಮಾನವ ಕಳ್ಳ ಸಾಗಣೆ ಅಪರಾಧ ಎಂದು ಉಲ್ಲೇಖಿಸಲಾಗಿದೆ; ಭಾರತ ಸರ್ಕಾರ, ಮಾನವ ಕಳ್ಳ ಸಾಗಣೆ ತಡೆ ಕಾಯ್ದೆ 1956ನ್ನು ಜಾರಿಗೊಳಿಸಿದೆ ಎಂದು, ಬೀದರ ಜಿಲ್ಲಾ ಪಂಚಾಯಿತಿ ಸಿ.ಇ.ಓ. ಗಿರೀಶ ಬದೋಲೆ ತಿಳಿಸಿದ್ದಾರೆ.

ಬೀದರ ಜಿಲ್ಲಾ ಪಂಚಾಯ್ತಿಯಲ್ಲಿ ಜರುಗಿದ, ಮಾನವ ಕಳ್ಳ ಸಾಗಣೆ ತಡೆ ದಿನಾಚರಣೆಗೆ, ಚಾಲನೆ ನೀಡಿ, ಮಾತನಾಡಿದರು.

ಇಂದಿಗೂ ಕೂಡ ಮಾನವ ಕಳ್ಳ ಸಾಗಣೆ ನಡೆದಿದೆ. ಈ ಪ್ರಕರಣಗಳನ್ನು ತಡೆಗಟ್ಟಲು, ಗಂಭೀರ ಹೆಜ್ಜೆ ಇಡಬೇಕಿದೆ ಎಂದರು.

<><><>

**8. ಮೈಸೂರಿನ ರಾಯನ ಕೆರೆ ನೀರು ಸಂಸ್ಕರಣಾ ಘಟಕ** ಹಾಗೂ ಘನ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ, ಇಂದು ಉಪ ಲೋಕಾಯುಕ್ತ ಕೆ.ಎನ್. ಫಣೀಂದ್ರ ಭೇಟಿ ನೀಡಿ, ಪರಿಶೀಲಿಸಿ, ಮೆಚ್ಚುಗೆ ವ್ಯಕ್ತ ಪಡಿಸಿದರು.

ಜನರಿಗೆ ತೊಂದರೆ ಆಗದಂತೆ, ಮುನ್ನೆಚರಿಕೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

<><><>

**9. ಚೊಚ್ಚಲ ಆವೃತ್ತಿಯ,** ಮಹಾರಾಣಿ ಟ್ರೋಫಿ, ಕೆ.ಎಸ್.ಸಿ.ಎ. ಟಿ–20 ಪಂದ್ಯಾವಳಿಗೆ, ಬೀದರ ಜಿಲ್ಲೆಯ, ಇಬ್ಬರು ಯುವ ಕ್ರಿಕೆಟ್ ಆಟಗಾರ್ತಿಯರನ್ನು, ಬೆಂಗಳೂರು ಬ್ಲಾಸ್ಟರ್ ತಂಡ ಸೇರಿಸಿಕೊಂಡಿದೆ.

ಬೀದರಿನ ಮಡಿವಾಳ ವೃತ್ತದ ಸಾಕ್ಷಿ ದೈಜೋಡೆ ಹಾಗೂ ಭಾಲ್ಕಿ ಪಟ್ಟಣದ ಅದಿತಿ ಬಕ್ಕಾ ಅವರು ಆಯ್ಕೆಯಾಗಿದ್ದಾರೆ.

ಭಾರತೀಯ ಕ್ರಿಕೆಟ್ ಮಂಡಳಿ ನಡೆಸುವ, 23 ವ ರ್ದೊಳಗಿನ ಮಹಿಳಾ ಟಿ 20 ಕ್ರಿಕೆಟ್ ಪಂದ್ಯದ, ಕರ್ನಾಟಕ ತಂಡಕ್ಕೆ, ಈ ಇಬ್ಬರು ಆಟಗಾರ್ತಿಯರು, ಕಳೆದ ವರ್ಷ, ಆಯ್ಕೆಯಾಗಿದ್ದರು.

ಕೆ.ಎಸ್.ಸಿ.ಎ. ರಾಯಚೂರು ವಲಯದ, ಬೀದರ್ ಜಿಲ್ಲಾ ಸಂಚಾಲಕ, ಕುಶಾಲ ಪಾಟೀಲ, ಗಾದಗಿ, ಉಭಯರನ್ನು ಅಭಿನಂದಿಸಿದ್ದಾರೆ.

<><><>

**10. ಇಂದು ಮತ್ತು ನಾಳೆ,** ಜೋರಾದ ಗಾಳಿಯೊಂದಿಗೆ, ರಾಜ್ಯದ ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ, ಚದುರಿದಂತೆ, ವ್ಯಾಪಕವಾಗಿ ಸಾಧಾರಣ ಮಳೆ, ಉತ್ತರ ಒಳನಾಡು ಜಿಲ್ಲೆಗಳಲ್ಲಿ, ಅಲ್ಲಲ್ಲಿ ಹಗುರದಿಂದ ಸಾಧಾರಣ ಮಳೆ ಹಾಗೂ ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ, ಒಣಹವೆ ಮುಂದುವರಿಯುವ ಸಾಧ್ಯತೆಯಿದೆ ಎಂದು, ಹವಾಮಾನ ಇಲಾಖೆ, ತಿಳಿಸಿದೆ.

<><><>

**11. ಬೆಂಗಳೂರಿನ, ಕಬ್ಬನ್ ಉದ್ಯಾನದಲ್ಲಿ,** ಸಸ್ಯ ಪ್ರಭೇದ, ಜೀವವೈವಿಧ್ಯ ಹಾಗೂ ಐತಿಹಾಸಿಕ ಸ್ಥಳಗಳನ್ನು, ಸಾರ್ವಜನಿಕರಿಗೆ ಪರಿಚಯಿಸಲು, 'ಕಬ್ಬನ್ ನಡಿಗೆ' ಆರಂಭವಾಗಿದೆ. ಪ್ರತಿ ಶನಿವಾರ ಮತ್ತು ಭಾನುವಾರ ಕಬ್ಬನ್ ವಾಕ್ಸ್ ಆಯೋಜಿತವಾಗಿದೆ. 10 ಜನ ಪರಿಸರ ಪರಿಣಿತರನ್ನು ಮಾರ್ಗದರ್ಶಕರಾಗಿ, ನೇಮಿಸಲಾಗಿದೆ.

ಮಾರ್ಗದರ್ಶಕರು ಕನ್ನಡ ಮತ್ತು ಇಂಗ್ಲಿ ್ ಭಾ ಗಳಲ್ಲಿ ಮಾಹಿತಿ ಹಂಚಿಕೊಳ್ಳಲಿದ್ದಾರೆ. ತಲಾ 200 ರೂಪಾಯಿ ಹಾಗೂ ಮಕ್ಕಳಿಗೆ ತಲಾ 50 ರೂಪಾಯಿ ದರ ನಿಗದಿಪಡಿಸಲಾಗಿದೆ. walk.cubbonpark.in ಜಾಲತಾಣದಲ್ಲಿ ಹೆಚ್ಚಿನ ಮಾಹಿತಿ ಇದೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**

**ಹರ್ಷ.**